## *ಉತ್ತಮ ನಡವಳಿಗಳು*

### ಮಂಗಳೂರು ಮಹಾನಗರಪಾಲಿಕೆಯಲ್ಲಿನ ಸಾರ್ವಜನಿಕ ಸಂಪರ್ಕ ಕೇಂದ್ರ, ನೀರಿನ ತೆರಿಗೆಯನ್ನು ನೀರಿನ ಉಪಯೋಗದ ಪ್ರಮಾಣದ ಆಧಾರದ ಮೇಲೆ ವಿಧಿಸುವ ವಿಧಾನ ಮತ್ತು ಎಸ್.ಎಂ.ಎಸ್. ಆಧಾರಿತ ತೆರಿಗೆ ಮಾಹಿತಿ ರವಾನೆ

ಮಂಗಳೂರು ಮಹಾನಗರಪಾಲಿಕೆ 2011 ರ ಜನಗಣತಿಯಂತೆ ಒಟ್ಟು 4,95,028 ಜನಸಂಖ್ಯೆಯನ್ನೊಂದಿದೆ. ಇದು ಸುಮಾರು 132.45 ಚರದ ಕೀಲೊ ಮೀಟರ್ ವ್ಯಾಪ್ತಿಯಲ್ಲಿ ನಗರ ವಿಸ್ತಾರಗೊಂಡಿದೆ.. ಇದು 60 ವಾರ್ಡ್‌ಗಳನ್ನು ಹೊಂದಿದ್ದು, ರಸ್ತೆ ವಿಸ್ತಾರ ಸುಮಾರು 888.9 ಕಿಲೋ ಮೀಟರ್ ರಷ್ಟಿದೆ. ನಗರದಲ್ಲಿ ಒಟ್ಟು 211578 ಆಸ್ತಿಗಳಿವೆ. ಈ ನಗರಕ್ಕೆ ಪ್ರತಿ ದಿನ 160 ಎಂ.ಎಲ್.ಡಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಪ್ರತಿ ವ್ಯಕ್ತಿಗೆ ಸರಾಸರಿ 135 ಲೀಟರ್ ಪ್ರತಿ ದಿನ ನೀರು ಒದಗಿಸಲಾಗುತ್ತಿದೆ.

ಈ ನಗರಪಾಲಿಕೆಯ ಎಲ್ಲಾ ವಾರ್ಡುಗಳಿಗೆ 24/7 ನಿರಂತರ ನೀರು ಪೂರೈಕೆಮಾಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಹಾಗೆಯೇ ಹೊಸದಾಗಿ ಬಳಕೆಯ ಸಾಮಾರ್ಥ್ಯಕ್ಕೆ ತಕ್ಕಂತೆ ತೆರಿಗೆಯನ್ನು ವಿಧಿಸುವ ವಿಧಾನವನ್ನು ಅಳವಡಿಸಲು ಪ್ರಯತ್ನಿಸಲಾಗಿದೆ.

### ನೀರು ಪೂರೈಕೆ

| ಕ್ರಮ ಸಂಖ್ಯೆ | ವಿವರ | ಅಂಕಿ ಅಂಶಗಳು | ಯುನಿಟ್ |
|---|---|---|---|
| 1 | ಸಾಮಾನ್ಯವಾಗಿ ವಾರದಲ್ಲಿ ನೀರು ಪೂರೈಕೆ ಮಾಡುವ ದಿನಗಳು | 5 | ದಿನಗಳು |
| 2 | ಸಾಮಾನ್ಯವಾಗಿ ಪ್ರತಿ ದಿನ ನೀರು ಪೂರೈಕೆಯ ಸಮಯ | 2 | ಗಂಟೆಗಳು |
| 3 | ನೀರಿನ ಸಂಪರ್ಕ ವಿರುವ ಕುಟುಂಬಗಳು | 75484 | ಸಂಪರ್ಕಗಳು |
| 4 | ನೀರಿನ ಮೀಟರ್ ಸಂಪರ್ಕವನ್ನೊಂದಿರುವ ಕುಟುಂಬಗಳು | 75484 | ಸಂಪರ್ಕಗಳು |
| 5 | ನೀರಿನ ಮೀಟರ್ ಸಂಪರ್ಕವನ್ನೊಂದಿದ್ದು ಪ್ರಸ್ತುತ ಚಾಲನೆಯಲ್ಲಿರುವ ಕುಟುಂಬಗಳು | 75484 | ಸಂಪರ್ಕಗಳು |
| 6 | ಪ್ರತಿದಿನದ ನೀರಿನ ಪೂರೈಕೆ ಪ್ರಮಾಣ | 142 | ಎಂಎಲ್.ಡಿ |
| 7 | ನೀರಿನ ಪೂರೈಕೆಗೆ ಮೊದಲು ಪ್ರತಿದಿನ ಶುದ್ದೀಕರಣಗೊಳ್ಳುತ್ತಿರುವ ನೀರಿನ ಪ್ರಮಾಣ | 142 | ಎಂಎಲ್.ಡಿ |
| 8 | ನೀರು ಶುದ್ದೀಕರಣಗೊಂಡ ನಂತರ ಪ್ರತಿದಿನದ ನೀರಿನ ಪೂರೈಕೆ ಪ್ರಮಾಣ | 142 | ಎಂಎಲ್.ಡಿ |
| 9 | ಬೋರ್‌ವೆಲ್ ಮೂಲಕ ಸಂಗ್ರಹಿಸುತ್ತಿರುವ ನೀರಿನ ಪ್ರಮಾಣ | 10 | ಎಂಎಲ್.ಡಿ |

**ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿನ ನೀರಿನ ಸಂಪರ್ಕಹೊಂದಿರುವ ಮನೆಗಳ ವಿವರ**

| ಕ್ರಮ ಸಂಖ್ಯೆ | ದರ | 2012 ಸೆಪ್ಟಂಬರ್ ವರೆಗೆ ಹೊಂದಿರುವ ಸಂಪರ್ಕದ ವಿವರ |
|---|---|---|
| 1 | ಗೃಹ ಬಳಕೆ | 70379 |
| 2 | ಗೃಹ ಬಳಕೆಯಲ್ಲದ್ದು | 4281 |
| 3 | ವಾಣಿಜ್ಯ | 814 |
| 4 | ಕೈಗಾರಿಕೆ | 3 |
| 5 | ಕಟ್ಟಡ ಕಾಮಗಾರಿ | 1273 |
| 6 | ಬಲ್ಕ್ ಸಪ್ಲೈ | 5 |
| | **ಒಟ್ಟು** | **76755** |

**ನೂತನವಾಗಿ ಜಾರಿಗೊಳಿಸಿರುವ ನೀರಿನ ತೆರಿಗೆ ವಿಧಾನ**

| ತೆರಿಗೆ | ಕನಿಷ್ಟ ದರ | 1ನೇ ಹಂತ | 2ನೇ ಹಂತ | 3ನೇ ಹಂತ | 4ನೇ ಹಂತ | 5ನೇ ಹಂತ | 6ನೇ ಹಂತ |
|---|---|---|---|---|---|---|---|
| ಗೃಹ ಬಳಕೆ ಸಾಮಾನ್ಯ | 0 -24000 (65 Rs) | 0-15000 (2.5 Rs) | 15000-30000 (3 Rs) | 30000-50000 (5 Rs) | 50000-75000 (7 Rs) | 75000-1ಲಕ್ಷ (10 Rs) | 1ಲಕ್ಷ ಮೇಲ್ಪಟ್ಟು (12 Rs) |
| ಗೃಹ ಬಳಕೆ ಎಸ್‌ಸಿ/ಎಸ್ಟಿ | 20 Rs (Per Tap) | | | | | | |
| ಗೃಹ ಬಳಕೆ ಜಲಭಾಗ್ಯ | 0-19500 (50 Rs) | 0-15000 (2.5 Rs) | 15000-30000 (3 Rs) | 30000-50000 (5 Rs) | 50000-75000 (7 Rs) | 75000-1ಲಕ್ಷ (10 Rs) | 1ಲಕ್ಷ ಮೇಲ್ಪಟ್ಟು (12 Rs) |
| ಗೃಹ ಬಳಕೆ ನೀರಿನ ತೆರಿಗೆಯಿಂದ ಹೊರಗುಳಿದಿರುವವು | 0 | | | | | | |
| ಗೃಹ ಬಳಕೆ ರಿಯಾಯಿತಿ | | 0-20000 (0 Rs) | 20000-40000 (0.4 Rs) | 40000-60000 (0.6 Rs) | 60000 ಮೇಲ್ಪಟ್ಟು (1 Rs) | | |
| ಗೃಹ ಬಳಕೆ ಸಾಮಾನ್ಯವಲ್ಲದ್ದು | 300 Rs | 0-10000 (15 Rs) | 10000 | | | | |

| | | | | | | | |
|---|---|---|---|---|---|---|---|
| | | | ಮೇಲ್ಪಟ್ಟು (20 Rs) | | | | |
| ವಾಣಿಜ್ಯ | 600 Rs | 0-30000 (20 Rs) | 30000 ಮೇಲ್ಪಟ್ಟು (30 Rs) | | | | |
| ಕೈಗಾರಿಕೆ | 600 Rs | 0-30000 (20 Rs) | 30000 ಮೇಲ್ಪಟ್ಟು (30 Rs) | | | | |
| ಕಟ್ಟಡ ಕಾಮಗಾರಿ | 1000 Rs | For Every 10000 (30 Rs | 1000 Rs | | | | |

**ಸಾರ್ವಜನಿಕರ ಸಂಪರ್ಕ ಕೇಂದ್ರ**

ಮಹಾನಗರ ಪಾಲಿಕೆಯ ವತಿಯಿಂದ ಸಾರ್ವಜನಿಕರ ಸಂಪರ್ಕ ಕೇಂದ್ರವನ್ನು ಕಳೆದ ವರ್ಷ ನವಂಬರ್ 2011 ರಲ್ಲಿ ಸ್ಥಾಪಿಸಲಾಗಿದೆ. ಇದರ ಮೂಲಕ ಸಾರ್ವಜನಿಕರು ಯಾವುದೇ ನಗರದ ಸೇವೆಗೆ ಸಂಬಂಧಿಸಿದಂತೆ ಸಂಪರ್ಕಿಸಬಹುದಾಗಿದೆ. ಈ ಸಂಪರ್ಕ ಕೇಂದ್ರದ ಮೂಲಕ ಮಾಹಿತಿಯನ್ನು ಸಂಗ್ರಹಿಸುತ್ತಿರುವುದರಿಂದ ನಾಗರಿಕರು ವಿನಾ: ಕಾರಣ ಮಹಾನಗರಪಾಲಿಕೆಗೆ ಭೇಟಿ ನೀಡುವುದು ತಪ್ಪಿದೆ. ಹಿಂದೆ ನಗರಪಾಲಿಕೆಗೆ ಭೇಟಿ ನೀಡುತ್ತಿರುವುದನ್ನು ಗಮನಿಸಿದರೆ ಶೇ 50 ಕ್ಕಿಂತಲೂ ಕಡಿಮೆ ಸಾರ್ವಜನಿಕರು ಭೇಟಿ ನೀಡುತ್ತಿರುವುದನ್ನು ಕಾಣಬಹುದಾಗಿದೆ. ಇದರಿಂದ ಸಾರ್ವಜನಿಕರಿಗೆ ಹೆಚ್ಚಿನ ಪ್ರಯೋಜನವಾಗಿದೆ.

**ಸಾಮಾನ್ಯವಾಗಿ ಸಾರ್ವಜನಿಕರು ಈ ಕೆಳಕಂಡ ಸೇವೆಗಳಿಗೆ ಸಂಪರ್ಕಿಸುತ್ತಿರುವುದನ್ನು ಕಾಣಬಹುದಾಗಿದೆ.**

1. ನೀರಿನ ಸಮಸ್ಯೆಗಾಗಿ
2. ಒಳಚರಂಡಿ ಸರಿಪಡಿಸಲು
3. ರಸ್ತೆ ರಿಪೇರಿ
4. ವಿದ್ಯುತ್ ವ್ಯವಸ್ಥೆ, ದೀಪದ ವ್ಯವಸ್ಥೆ
5. ಘನ ತ್ಯಾಜ್ಯವಸ್ತುಗಳ ಬಗ್ಗೆ
6. ಸ್ವಚ್ಛತೆ
7. ಆಸ್ತಿ ತೆರಿಗೆ, ನೀರಿನ ತೆರಿಗೆ, ಬಿಲ್ಡಿಂಗ್ ಲೈಸೆನ್ಸ್ ಇನ್ನಿತರೆ ಮಾಹಿತಿಗಾಗಿ

**ಎಸ್.ಎಂ.ಎಸ್. ಮೂಲಕ ಬಿಲ್ ಮಾಹಿತಿ ರವಾನೆ**

ಮಹಾನಗರ ಪಾಲಿಕೆ ಆಧುನಿಕ ತಂತ್ರಜ್ಞಾನದ ಮೂಲಕ ಗ್ರಾಹಕರಿಗೆ ತೆರಿಗೆ ಮಾಹಿತಿಯನ್ನು ಮೊಬೈಲ್ ಎಸ್.ಎಂ.ಎಸ್. ಮೂಲಕ ಕಳುಹಿಸುವ ಮಾಹಿತಿಯನ್ನು ಅಳವಡಿಸಲಾಗಿದೆ. ಇದರ ಮೂಲಕ ಸಾರ್ವಜನಿಕರು ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದು, ಅದಕ್ಕೆ ಅನುಗುಣವಾಗಿ ತೆರಿಗೆ ಪಾವತಿ ಮಾಡುತ್ತಿರುವುದು ಸಾಮಾನ್ಯವಾಗಿದೆ. ಸಾರ್ವಜನಿಕರಿಗೆ ತೆರಿಗೆ ಯಾವಾಗ ತುಂಬ ಬೇಕು, ತೆರಿಗೆ ಹಣ ಎಷ್ಟು ಸಂದಾಯವಾಗಬೇಕು, ವಿಳಂಬ ಮಾಡಿದರೆ ಎಷ್ಟು ದಂಡ ವಿಧಿಸಲಾಗುತ್ತದೆ. ಎಂಬ ಮಾಹಿತಿಯು ಈ ವಿಧಾನದ ಮೂಲಕ ಲಭ್ಯವಾಗುತ್ತಿರುವುದರಿಂದ ನಾಗರೀಕರಿಗೆ ಹೆಚ್ಚಿನ ಅರಿವು ಉಂಟಾಗಿದೆ.

**ಅನುಕೂಲಗಳು**

1. ನಿಗದಿತ ಸಮಯದಲ್ಲಿ ತೆರಿಗೆ ವಸೂಲಿಯಾಗಲು ಸಹಾಯಕವಾಗಿದೆ.
2. ಮಹನಗರಪಾಲಿಕೆಗೂ ಸಹ ಇದರಿಂದ ಸಮಯ ಉಳಿತಾಯವಾಗುವುದು
3. ಮಾನವ ಸಂಪನ್ಮೂಲ ಬಳಕೆಯ ಕಡಿಮೆಗೊಳಿಸಿರುವುದು,
4. ನಿಗಧಿಯಾದ ಸಮಯಕ್ಕೆ ಸರಿಯಾಗಿ ತೆರಿಗೆ ವಸೂಲಿಯಾಗುತ್ತಿವುದು ಕಂಡುಬಂದಿದೆ.
5. ಇದರಿಂದ ನಾಗರಿಕರಿಗೆ ಸಮಯದ ಉಳಿತಾಯ ಮತ್ತು ಬೇಗ ಮಾಹಿತಿ ಲಬ್ಯವಾಗುತ್ತಿರುವುದು,
6. ಮಹಾನಗರಪಾಲಿಕೆಗೆ ಹೆಚ್ಚಿನ ಪ್ರಯೋಜನವಾಗಿರುವುದನ್ನು ಕಾಣಬಹುದಾಗಿದೆ.

***********